S C.R.P.67

Form No.4<br>(Criminal)<br>Deposition<br>Sheets<br>(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 65/2022

**ಚಾ.ಸಾ.–06 ಪ್ರಾ.ಸಾ.–04**

| | |
|---|---|
| **ಸಾಕ್ಷಿದಾರರ ಹೆಸರು** | **ವಿನಯ್ ಕುಮಾರ್** |
| **ತಂದೆಯ ಹೆಸರು** | **ತಮ್ಮಯ್ಯ** |
| **ವಯಸ್ಸು** | **37 ವರ್ಷಗಳು** |
| **ಉದ್ಯೋಗ** | **ವ್ಯವಸಾಯ** |
| **ವಾಸ** | **ರಾಗಿಮುದ್ದನಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು** |

**ದಿನಾಂಕಃ 29.07.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ– 1 ರವರ ಪರಿಚಯ ಇದೆ. ಅವರು ನಮ್ಮ ಗ್ರಾಮದವರು. ಅವರು ಪರಿಶಿಷ್ಟ ಜಾತಿಯ ಜನಾಂಗಕ್ಕೆ ಸೇರಿದವರು. ಆರೋತಿರ ಪರಿಚಯ ಇದೆ, ಅವರೂ ಕೂಡ ನಮ್ಮೂರಿನವರು, ಅವರು ಒಕ್ಕಲಿಗ ಜಾತಿಯವರು. ನಾನು ಒಕ್ಕಲಿಗ ಜಾತಿಯವನು, ಈಗ ನನಗೆ ತೋರಿಸುತ್ತಿರುವ ನಿಪಿ 2 ಮಹಜರಲ್ಲಿ ಇರುವ ಸಹಿ ನನ್ನದು ಸಾಕ್ಷಿ ಸಹಿಯನ್ನು 2 (ಸಿ) ಎಂದು ಗುರುತಿಸಲಾಯಿತು. ನಿಪಿ 6 ಭಾವಚಿತ್ರದಲ್ಲಿ ನಾನು ಕಂಡು ಬರುತ್ತೇನೆ. ನನ್ನ ಜೊತೆ ಪೋಲೀಸರು ಇದ್ದಾರೆ, ಇನ್ನೂ ಯಾರೋ ಇದ್ದಾರೆ, ಇನ್ನೂ ಇಬ್ಬರು ಇದ್ದಾರೆ ಅವರು ಯಾರು ಎಂದು ಗೊತ್ತಿಲ್ಲ, ಅದರಲ್ಲಿ ಕಾಣಿಸುವ ಮಹಿಳೆ ನನಗೆ ಗೊತ್ತಿಲ್ಲ. ಭಾವಚಿತ್ರವನ್ನು ಎಲ್ಲಿ ತೆಗೆಯಲಾಗಿದೆ ಎಂದು ಗೊತ್ತಿಲ್ಲ.

ಅದನ್ನು ನಮ್ಮೂರಿನಲ್ಲಿ ತೆಗೆಯಲಾಗಿದಿಯೋ ಗೊತ್ತಿಲ್ಲ, ಪೊಲೀಸರು ಯಾಕೆ ಬಂದಿದ್ದರು ಗೊತ್ತಿಲ್ಲ. ಅವರು ರಾಗಿಮುದ್ದೇನಹಳ್ಳಿಗೆ ಬಂದ ಬಗ್ಗೆ ಸಾಕ್ಷಿಯಾಗಿ ಬನ್ನಿ ಎಂದು ಹೇಳಿರುತ್ತಾರೆ. ಪೊಲೀಸರು ನಮ್ಮ ಊರಿನ ಮಾರಮ್ಮನ ದೇವಸ್ಥಾನ ಬಳಿ ಸಹಿ ಪಡೆದಿದ್ದಾರೆ. ಭಾವಚಿತ್ರದಲ್ಲಿ ಕಂಡು ಬಂದ ಮನೆ ಯಾವುದು ಎಂದು ಗೊತ್ತಿಲ್ಲ. ಅದು ನಮ್ಮೂರಿನ ಮನೆಯ ಅಲ್ಲವಾ ಎಂದು ಗೊತ್ತಿಲ್ಲ. ಭಾವಚಿತ್ರವನ್ನು ತೆಗೆದಿದ್ದು ಗೊತ್ತಿಲ್ಲ. ಆದರೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಭಾಚಿತ್ರದಲ್ಲಿ ಆರೋಪಿಯ ಮನೆ ಕಂಡು ಬಂದಿರುವುದಿಲ್ಲ. ಬಗ್ಗೆ ಮಂಜನಾಥ ತಂದೆ ಗಿರಿಯಯ್ಯ ಗರಾಗಿಮುದ್ದೇನ ಹಳ್ಳಿಯವರ ಪರಿಚಯ ನನಗೆ ಇಲ್ಲ. ಅವರನ್ನು ನಾನು ನೋಡಿಲ್ಲ. ನಾನು ಸಹಿ ಮಾಡಿ 4-5 ವರ್ಷ ಆಗಿರುತ್ತದೆ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆಯಾಲಗಿತ್ತು ಅಂತ ನನಗೆ ಗೊತ್ತಿಲ್ಲ. ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ಏನು ಪ್ರಕರಣದ ಆಗಿದೆ ಅಂತ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

2) ದಿಃ02.12.2021 ರಂದು ತಾರೀಖು ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಮತ್ತು ಮಂಜುನಾಥ್ ರವರನ್ನು ಮಹಜರಿಗೆ ಸಾಕ್ಷಿಯಾಗಲು ಕರೆದರು ಎಂದರೆ ಸರಿಯಲ್ಲ. ಆ ರೀತಿ ಚೇತನ್ ರವರ ಮನೆಯ ಬಳಿ ಕರೆದರು ಎಂದರೆ ಸರಿಯಲ್ಲ. ನಾನು ಅದಕ್ಕೆ ಒಪ್ಪಿ ಸಾಕ್ಷಿಯಾಗಿ ಇದ್ದೇನೆ ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ಇಲ್ಲೇ ಗಲಾಟೆಯಾಗಿದ್ದೆಂದು ಪೋಲೀಸರಿಗೆ ಚೇತನ್ ರವರ ಮನೆಯ ಬಳಿ ತೋರಿಸಿಕೊಟ್ಟರು ಎಂದರೆ ಸರಿಯಲ್ಲ. ಆಗ ನಿಪಿ. 6 ನ್ನು

ತೆಗೆಯಲಾಗಿದೆ ಎಂದರೆ ಸರಿಯಲ್ಲ. ಆ ನಂತರ ಪೊಲೀಸರು ನಮ್ಮ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಪೊಲೀಸರು ನನಗೆ ಸಹಿ ಮಾಡುವ ಮೊದಲು ಓದಿ ಹೇಳಿದರು ಎಂದರೆ ಸರಿಯಲ್ಲ. ಭಾವಚಿತ್ರದಲ್ಲಿ ಚಾಸಾ- 1 ರವರು ಕಂಡು ಬರುತ್ತಾರೆ ಎಂದರೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಮಂಜುನಾಥ್ ರವರು ಕೂಡ ಸದರಿ ಭಾವಚಿತ್ರದಲ್ಲಿ ಕಂಡು ಬರುತ್ತಾರೆ ಎಂದರೆ ಸರಿಯಲ್ಲ. ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ಕನ್ನಡ ಓದಲು, ಬರೆಯಲು ಬರುತ್ತದೆ. ನಾನು ವ್ಯವಸಾಯ ಮಾಡುತ್ತೇನೆ. ನಾವು ತೆಂಗು , ಅಡಿಕೆ ಮತ್ತು ಜೋಳ ಬೆಳೆಯುತ್ತೇನೆ. ಅವನ್ನು ಮನೆಗೂ ಇಟ್ಟುಕೂಳ್ಳುತ್ತೇವೆ. ಮಾರಾಟ ಮಾಡುತ್ತೇವೆ, ಸದರಿ ಲೆಕ್ಕದ ವ್ಯವಹಾರ ನನಗೆ ಗೊತ್ತಾಗುತ್ತದೆ. ನನಗೆ ವ್ಯವಹಾರ ಜ್ಞಾನ ಚೆನ್ನಾಗಿರುತ್ತದೆ ಎಂದರೆ ಸರಿ. ಸಾಕ್ಷಿ 1 ವರ್ಷದಿಂದ ಚೆನ್ನಾಗಿದೆ ಎನ್ನುತ್ತಾರೆ. ಅದರ ಹಿಂದೆ ಬಿದ್ದು ತಲೆಗೆ ಗಾಯವಾಗಿತ್ತು, ಆ ರೀತಿ ಒಂದು ಮುಕ್ಕಾಲು ಎಡರು ವರ್ಷದ ಹಿಂದೆ ಗಾಯವಾಗಿತ್ತು. ಆ ರೀತಿ 2024 ರ ಅವಧಿಯಲ್ಲಿ ಅಂದರೆ ಇರಬಹುದು . ಅದರ ಹಿಂದೆ ನಾನು ಚೆನ್ನಾಗಿದ್ದೆ. ಅವಾಗ ವ್ಯವಹಾರ ಜ್ಞಾನ ಚೆನ್ನಾಗಿ ಇತ್ತು. ದಾಖಲೆಗೆ ಸಹಿ ಮಾಡುವ ಮೊದಲು ಓದಿ ಸಹಿ ಮಾಡಬೇಕಿದೆ ಎಂದು ನನಗೆ ಗೊತ್ತಿದೆ ಎಂದರೆ ಸರಿ. ದಾಖಲೆಯನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. 2021 ರಲ್ಲಿ ನಿಪಿ 5 ನ್ನು ಓದಿ ತಿಳಿದುಕೊಂಡು ಸಹಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಅಂದರೆ ಸಾಕ್ಷಿದಾರರು ಪೊಲೀಸರನ್ನು ಕಂಡರೆ ನನಗೆ ಭಯ ಇರುತ್ತದೆ. ಆದ್ದರಿಂದ ನಾನು ಸಹಿ ಮಾಡಿರುತ್ತೇನೆ . ನಿಪಿ 5 ಅನ್ನು ಓದಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಓದಿ ಸಹಿ ಮಾಡಲು ತೊಂದರೆ ಇರಲಿಲ್ಲ. ಪೊಲೀಸರು ನನಗೆ ಬೆದರಿಕೆ ಹಾಕಿ ಸಹಿ ವಪಡೆದು ಕೊಂಡಿರುವುದಿಲ್ಲ. ನಿಪಿ 5 ರಲ್ಲಿ ಇರುವ ಎಲ್ಲಾ ಅಂಶಗಳು ನನಗೆ ಗೊತ್ತಿದೆ ಅಂದರೆ ಸರಿಯಲ್ಲ. ಚಾಸಾ- 1 ಮತ್ತು ಮಂಜುನಾಥ. ರವರು ಸ್ಥಳದಲ್ಲಿ ಸಹಿ ಮಾಡಿದ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಊರಿನವರು ನಮ್ಮ ಜನಾಂಗದವರು ಎಂದರೆ ಸರಿ. ಅವರಿಗೆ ನಮಗೆ ಮನಸ್ತಾಪಗಳು ಆಗುತ್ತಿರುತ್ತದೆ. ನಾವು ಕೇಸು ಆಡುವ ಮಟ್ಟಿಗೆ ಜಗಳಮಾಡಿಕೊಂಡಿಲ್ಲ. ನಾನು ಮತ್ತು ಆರೋಪಿ ಒಂದು ಊರಿನವರು ಮತ್ತು ಒಂದೇ ಜಾತಿಯವರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ  ಆರೋಪಿತರ ಪರ ಶ್ರೀ ಕೆ.ಆರ್.ಎಂ ವಕೀಲರಿಂದಃ**

3) ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ